'ಮೊದ್ಲೇ ಅಡ್ನಾಡ್ಯೋನಿಗಿ ಹುಟ್ಟಿದವು ಯಂಗ ಬುಟ್ಟವು ತಮ್ಮಪಾಯ' ಅಂದು ಅವುಗಳಿಗೆ ಮೈತೊಳೆಯಲು ಬಚ್ಚಲಿಗೆ ಎರಡು ಕೈಲಿ ಎರಡನ್ನ ದರದರ ತಂದು ಹಾಕಿದಳು. ಈಕಡೆ ಎರಡೇಟು ಆವಾಗ್ಲೆ ವದಿಸಿಗೆಂಡು ಕೂತಿದ್ದ ಅವಳೆಪ್ಪ, 'ಆ ಸೂಳೆಮಗ ಬಂಗಾಲಿ ಡಾಕ್ಟ್ರು, ನನ ಕೈಯಾಗ ಸಿಗ್ಲಿ, ಜಲ್ಮದಾಗ ಒಂದಬೇರೆ ಆದ್ರೂ ಒತ್ತಿನಿ. ಆಪ್ರೇಶನ್ನ ಮಾಡಿ ನನಗಷ್ಟೆ ಹಾಸಿಗೆ ಪತ್ತೇವು ಮಾಡಂತ ಸೂಕ್ಷಿಮಿ ಹೇಳ್ಬಕು, ಅದುಬಿಟ್ಟು ನನ್ನೇಣ್ತಿಗಿ ಶೆಂರ್‍ದ್ಯಾಕ ಹೇಳ್ಬೆಕಾ? ಅವನೇಳಿದಾಗಲಿಂದ ಬರ್‍ಲ ಮಕ್ಕಂಬೋದು ಆಗ್ಯೆತಿ ನನ್ನ ಬಾಳೇವು' ಅಂತ ಯೋಚನೆ ಮಾಡುತ್ತಾ ಕುಳಿತ.

ಅವಳೆಪ್ಪ ಪರ್‍ಗೈ ಅಂತ ಅಡ್ಡೆಸರು ಯಂಗ ಬಂತಂದ್ರ, ಸಣ್ಣವನಿದ್ದಾಗ ಅಂದರ ಯಾವಾಗ ತನ ಮುಕಳೆ ತಾನು ತೊಳಕಂಬೋಟು ಕೈಗಿ ಬಂದಾಗ ಮುಕಳೇನ ಬಲಗೈಲಿ ತೊಕಂತಿದ್ದ. ಅವಳೆಪ್ಪನ ತಾಯಿ ಸಿಟ್ಟಿಗೇರಿ, 'ಲೋ ಅವಳ್ಯಾ ಯಾರನ್ನ ಪರ್‍ಗೈಲೆ ಮುಕಳೆ ತೊಕಂತಾರ ಸೈಯಪ್ಪ, ಬಲಗೈಲಿ ತೊಕಂಬೋದ ಲೋಕದಾಗ ನೋಡಿಲ್ಲಬುಡು' ಅಂದಳು. ಎಷ್ಟು ಹೇಳಿದ್ರುನೂ ಬಲಗೈಲೆ ಮುಕಳೆ ಎಡಗೈಲೆ ಊಟ ಮಾಡೋದು ರೂಢಿ ಮಾಡಿಕೊಂಡ. ಅವತ್ತಿನಿಂದ ಅವಳೆಪ್ಪನ ಮುಂದ ಪರ್‍ಗೈಯಂತ ಪುಗಸಟ್ಟೆ ಬಂದು ಕುಂತುಬಿಟ್ಟಿತ್ತು. ಒಂದಿನ ಮುಕಳೇನ ಬಾಳ ಬಿರಿಸಿಲೆ ತೊಕವತ್ತಿನ್ಯಾಗ ಬೀಜ ಕೈಗಿ ಬಡದುಬಿಟ್ಟವು. ಹಿಸಗಿ ನೋಡಿದ ಬೀಜ ಒಂದೇ ಇತ್ತು. ಅವಳೆಪ್ಪಗ ಹೊಟ್ಟೆ ರುಮ್... ರುಮ್.. ಅಂದಂಗಾತಿ. ತಮ್ಮ ವಾರಿಗೇರನ ಯಿಚಾರ ಮಾಡಿದ. ನಿಮಗ ಬೀಜ ಎಷ್ಟು ಐದ್ಯಾವ? ಎಷ್ಟು ಐದ್ಯಾವ? ಅಂತ ಪೂರ್ತಿ ಮನಿಸಿಗಿ ಹಚ್ಚಿಗೆಂಡು ಓಣಿ ಓಣಿ ತಿರುಗಿ ಕೇಳಿದ. ಎಲ್ಲರ ಬಾಯಾಗ ಉತ್ತರ ಎರಡು ಅಂತ ಬಂದವು. ಅವಳೆಪ್ಪ ಕೊನಿಗಿ ತಾಯಿತಕ ಬಂದು ಕಣ್ಣಾಗ ನೀರು ತಂದಕಂಡು 'ಯಮಂಗೆ ನಾನು ಬಾಳದಿನ ಉಳೆಲ್ಲಂಗೆ, ನಂದು ಬೀಜ ಒಂದ್ಯೆತಿ' ಅಂದ. 'ಇರ್‍ಲಬುಡಲೋ ಒಂಟಿಬೀಜ ಇದ್ದೋರು ಬಹಳ ದೇಶವ್ಯಾನ್ರು, ಎರಡು ಗಂಟು ಹಾಕರ್‍ತಾವ ಬರುಬರುತ್ತಾ ಬ್ಯಾರೆ ಆಗ್ತಾವ' ಅಂತ ತಾಯಿ ಒಣಧೈರ್ಯ ತುಂಬಿದ್ದಳು. ಅವಳೆಪ್ಪ ಹಿಂದಿನದೆಲ್ಲಾ ನೆನಿಸಿಗೊಂಡು, 'ನವಮ್ಮೇನಾದ್ರೂ ಅವತ್ತು ಕರೆಟ್ಟು ಚೆಕ್ ಮಾಡಿ ಅವತ್ತೆ ಆಪ್ರೇಶನ್ನ ಮಾಡಿಸಿಬಿಟ್ಟಿದ್ರ, ಇವತ್ತ ಹಾಸಿಗೆ ಪತ್ತೇವು ಮಾಡೊ ಗತಿನೇ ಬರ್‍ತಿರಲಿಲ್ಲ' ಅಂದು ಮತ್ತೆ ಅದೇ ಚಿಂತಿಯಲ್ಲಿ ಮುಳಗಿದ. 'ನಂದೇನು ಅಂತ ವಯಸ್ಸಾಗ್ಯೆತೆಪ್ಪಾ? ಇವು ದೀಪಾರ ಹೊಸ್ತಾಗಿ ಮದ್ವಿ ಆದವು ನಮ್ಮ ಮನೆ ಮುಂದಾನೇ ಸೋಗು ಮಾಡಿಕ್ಯಾಂತ ಅಡ್ಡಾಡತಾವ. ಆ ಬೋರಿಂಗನ ಒಂದಿನ ಮುರುದುಬಿಡ್ತಿನಿ, ಆವಾಗೆಲ್ಲ ಸರಿಹೋಗುತ್ತ' ಅಂದು ಮತ್ತೆ ಗ್ವಾಡೆ ಸರಿಸಿ ಕುಂತ.

ಮನೆಮುಂದ್ಲಾಸಿ ಒಂಟಿದ್ದ ಜಿನ್ನದೋರು ಮುತ್ತಗ, 'ಹೇ ಮಾವ ಜೀರಾ ಎಂಟು ಬಂತು ನೋಡು' ಅಂದಾಗ ಅಬಾಬಾ ಜೀರಾ ಮೂರು ಆಡಿದ್ದೆ ಪೇಲಾತಿ. ಓಪನ್ನಿಗೆನ್ನ ಇಟ್ಟಿದ್ದರ ನನ್ನ ರಕ್ಕ ನನಿಗಿ ಬರತಿದ್ದವು' ಅಂತ ಕಳಬುರಸವತ್ತಿನ್ಯಾಗ, ಹಿಂದನೇ ನಿಂತಿದ್ದ ಮಾರೆಮ್ಮ, 'ಓಸಿ ಇಸ್ಟಟ್ಟು ಆಡಿ ಮನೆಪನೆ ದೀಪತೆಕ್ಕಂಡು ಹೋಗ್ರಲೋ... ನೀನು ನಿಮ್ಮಾವ ಸೇರಿ' ಅಂತ ಮುತ್ತಗೀಟು ಬೈಯ್ದು ಮತ್ತೆ ಒಂದೇಟು ಗಂಡಗ ಒದ್ದಳು. 'ಈ ಕಳ್ಳರು ನನ್ನ ಒದಸಾಕ ನಮ್ಮನಿತಾಕ ಬರತಾರೇನು?' ಅಂತ ಮನಿಸಿನೊಳಗ ಅನುಕೊಂಡ.

ಮೊದಲೆಲ್ಲಾ ಬೆಳಗಾಂ ಕರ್‍ಯಾಗ ಸಂಬಳಕಿದ್ದ ಅವಳೆಪ್ಪ, ಆಪ್ರೇಶನ್ನ ಮಾಡಿಸಿಕೊಂಡಾಗಲಿಂದ ಯಾವ ಕೆಲಸ ಮಾಡೋದ ಆಗವಲ್ದು. ಓಸಿ ಚಾಟು ನೋಡಿಕ್ಯಾಂತ, ಹುಲಿಮನೆ ಆಡಿಕ್ಯೋಂತ, ಹೇಣ್ತಿ ದುಡದದ್ದು ಖರ್ಚು ಮಾಡಿಕೋಂತ ವತ್ತಗಾಮಣಿ ಮಾಡೋದು ಕಲಿತುಬಿಟ್ಟಿದ್ದ. ಅದಕ್ಕ ಮಾರೆಮ್ಮಗ ಸಿಟ್ಟು. ದುಡೇದಿಲ್ಲ, ದುಕ್ಕಬಡೇದಿಲ್ಲ ಹಾಕಿದ್ದ ತಿಂದು ಬಿದ್ದಕಂಡಿರಲಾರದ ಮತ್ತೆ ಜ್ವಾಳದ ಚೀಲದಾಗ, ಅಕ್ಕಿ ಚೀಲದಾಗ ಬಚ್ಚಿಟ್ಟಿದ್ದ ರಕ್ಕ ತಗಂಡ ಹೋಗಿ ಓಸಿ ಬರಸುತ್ತಿದ್ದ. ಮಾರೆಮ್ಮ ಒಂದಿನ ಓಸಿ ಅಯ್ಯಪ್ಪನ ಮನಿಗಿ ಹೋಗಿ, 'ನಮ್ಮನೆಳಾತ ಓಸಿ ಬರಸಾಕ ಬಂದ್ರ ಬರಕಬ್ಯಾಡ್ರಿ, ಇಲ್ಲಂದ್ರ ನಾನ ಪೋಲಿಸ ಠಾನಿಗಿ ಹೇಳಿ ಹಿಡಕೊಡತೀನಿ ನೋಡು ನಿಮ್ಮನ್ನ' ಅಂತ ವಾರ್ನಿಂಗ ಕೊಟ್ಟು ಬಂದಿದ್ದಳು. ಆವತ್ತಿನಿಂದ ಗಂಡ ಓಸಿ ಆಡೋದು ಬಿಟ್ಟಾನ ಅಂತ ತಿಳಿದುಕೊಂಡಿದ್ದಳು. ಇವತ್ತು ಮುತ್ತ ಬಂದು ಬಟಾಬಯಲಿಗಿ ಹಾಕಿಬಿಟ್ಟ.

* * *

ನಿನ್ನೆ ಮುಂಜೇಲಿ ಅವಳೆಪ್ಪನ ಹುರಿಮಾಡಿ ಮೂಲೆಮನಿ ದ್ಯಾವಣ್ಣ, ಅಗಸರ ನಾಗಲಿಂಗ, 'ಅವಳಿ ಬಾಲೇ ಸಿನ್ನೂರು ಸಂಗಮ್ಮ ಟಾಕೀಜಿನ್ಯಾಗ 'ಎ'